ತಾರೀಖು 31ನೆ ಜನವರಿ 1907.

ನಂ. ಆರ್. 7279—ಎಲ್. ಆರ್. 433-06-3; ಸ. 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಲ್ಲೀ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ; ಕಾವೇರಿ ವೈದ್ಯುತಕಕ್ಕೆ ಇಲಾಖೆಯ ಲೈನ್ಸ್ ಮೇ ಯಾ ತಂತಿಗಳನ್ನು ನೋಡಿಕೊಳ್ಳುವ ಜನಗಳಿಗೆ ಒಂದು ಚಿಕ್ಕ ಮನೆಯನ್ನು ಕಟ್ಟುವುದಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (ಸಿ) ಪ್ರಕರಣಗಳನ್ನನುಸರಿಸಿ ಕೋಲಾರ್ ಟ್ರಿಸಿಟಿ ಸಪ್ಲೈ ಡಿವೀಜ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ :—

| ತಿನ್ಸಿಫ್ಸು | ತಾಲೂಕು. | ಹೋಬಳಿ. | ಗ್ರಾಮದ. | ಖಾತೇದಾರರ ಹೆಸರು. | ಸರ್ವೆ ನಂಬರು. | ಖುಷ್ಕಿ ಅಥವಾ ಬಾಗಾಯ್ತು. | ಈಗ ಸರಕಾರಕ್ಕೆ ಬೇಕಾಗಿರುವ ಜಮೀನಿನ ಪ್ರಮಾಣ. | ಚಕ್ಕುಬಂದಿ. | | | |
|---|---|---|---|---|---|---|---|---|---|---|---|
| | | | | | | | | ಪೂರ್ವ. | ಪಶ್ಚಿಮ. | ಉತ್ತರ. | ದಕ್ಷಿಣ. |
| | | | | | | | ಎ. ಗು. | | | | |
| ಬೆಂಗಳೂರು | ಕಾನಕಾನಹಳ್ಳಿ | ಹೀರೇಹಳ್ಳಿ | ಕಾಮಸಂದ್ರ (ಸರ್ಕಾರಿನದ್ದು) | ಖಾತೇದಾರ (ಫಾಲತ) ಮುನಿರಾಯಪ್ಪನ ಮಗ ವೆಂಕಟಪ್ಪನಿಗೆ | 361 | ಖುಷ್ಕಿ | 0 10 | ಸರ್ವೆ 361ನೆ ನಂಬರು | ಸರ್ವೆ 361ನೆ ನಂಬರು | ಸರ್ವೆ 362ನೆ ನಂಬರು | ಸರ್ವೆ 361ನೆ ನಂಬರು |

ತಾರೀಖು 13ನೆ ಫೆಬ್ರವರಿ 1907.

ನಂ. ರೆ. 7493—ಫಾರೆಸ್ಟ್ 24-06—10, ಈ ಇಸ್ತಿಹಾರ್ನಾವೆಯ ಮೂಲಕ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಗಂಧದ ಮರಗಳಿಗೆ ಬರುವ ಸ್ಪೈಕ್ ರೋಗದ ಕಾರಣವನ್ನು ಕಂಡು ಹಿಡಿದು ಅದನ್ನು ಸಮೂಲವಾಗಿ ನಾಶಮಾಡುವುದಕ್ಕೆ ಪ್ರಬಲವಾಗಿಯೂ, ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕುದಾಗಿಯೂ ಇರುವ ಔಷಧವನ್ನು ತಿಳಿಸುವವರಿಗೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಕೊಡಲು ಸಿದ್ಧವಾಗಿರುತ್ತಾರೆ. ಈ ಬಹುಮಾನವು ಈ ಇಸ್ತಿಹಾರ್ನಾವೆಯ ತಾರೀಖಿನಿಂದ ಮೂರು ವರ್ಷಗಳೊಳಗೆ ಯಾವಾಗಲಾದರೂ ಪಡೆಯತಕ್ಕುದಾಗಿರುತ್ತದೆ.

2. ಮೇಲೆ ಕಂಡ ಬಹುಮಾನವನ್ನು ಅಪೇಕ್ಷಿಸುವ ಪ್ರತಿಯೊಬ್ಬರೂ ತಾವು ಶೋಧನೆ ಮಾಡಿದುದರ ರಿಪೋರ್ಟನ್ನು, ಸೂಕ್ಷ್ಮದರ್ಶಿಯಲ್ಲಿ ಪರೀಕ್ಷಿಸುವುದಕ್ಕಾಗಿ ಪದಾರ್ಥಗಳ ಚಿತ್ರಗಳಿರುವ ಕನಡಿಗಳು, ನಕ್ಷೆಗಳು ಮೊದಲಾದುವುಗಳೊಡನೆ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಕಾರ್ಯದರ್ಶಿಯವರಿಗೆ ಕಳುಹಿಸಬೇಕು. ಈ ಬಹುಮಾನ ಪಡೆಯುವುದಕ್ಕೆ ತರುವಾಯವಾವ ಬಿನ್ನಹವನ್ನೂ ಅಂಗೀಕರಿಸುವುದಕ್ಕೂ ಮೊದಲು ಈ ಕೆಳಗಿನ ಷರತ್ತುಗಳನ್ನು ನೆರವೇರಿಸಿರಬೇಕು :—

(1) ರೋಗದ ಕಾರಣವನ್ನು ನಿರ್ಣಯವಾಗಿಯೂ ಸ್ಪಷ್ಟವಾಗಿಯೂ ಗೊತ್ತುಮಾಡಿರಬೇಕು.

(2) ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕುದಾಗಿಯೂ ಇರುವ ಒಂದು ಔಷಧವನ್ನು ಹೇಳಿರಬೇಕು.

(3) ಆ ಔಷಧವು, ರೋಗ ಹರಡಿಕೊಳ್ಳುವುದನ್ನು ಒಂದು ವರ್ಷದೊಳಗಾಗಿ ಕಂಡಹಾಗೆ ನಿಲ್ಲಿಸುವಂಥಾದ್ದಾಗಿರಬೇಕು. ಎಲ್ಲಾ ವಿನ್ನಹಗಳನ್ನೂ, ಸರ್ಕಾರದವರು ನೇಮಿಸುವ ಜಂಗಲಿ ಅಧಿಕಾರಿಗಳೂ ಸೇರಿ ಈ ವಿಷಯವನ್ನು ವಿಶೇಷವಾಗಿ ಪರಿಶೋಧಿಸಿರುವ ಮೂವರು ಪಂಡಿತರಿಗೆ ಕಾಮಯಿಲ್ಲದ ಒಂದು ಸಭೆಗೆ, ತೀರ್ಪಿನ ಬಗ್ಗೆ ಒಪ್ಪಿಸಲಾಗುವುದು; ಆ ಸಭೆಯು ಅಥವಾ ಅಲ್ಲಿನವರ ಪೈಕಿ ಹೆಚ್ಚು ಸಂಖ್ಯೆಯವರ ತೀರ್ಪೇ ಕಡೆಯದಾಗಿರುವುದು.

3. ಈ ವಿಷಯವನ್ನು ಶೋಧನೆ ಮಾಡಲು ಇಷ್ಟವುಳ್ಳವರು, ಸ್ಪೈಕ್ ರೋಗವನ್ನು ನಿರ್ಮೂಲನಮಾಡುವ ವಿಷಯವನ್ನು ಕುರಿತ, ಮುಖ್ಯವಾದ ಮತ್ತು ಉಪಯೋಗವಾದ ಕಾಗದ ಪತ್ರಗಳನ್ನು ಸಂಗ್ರಹಿಸಿ ಒಟ್ಟಾಗಿ ಅಚ್ಚು ಹಾಕಿರುವ ಪುಸ್ತಕದ ಪ್ರತಿಗಳನ್ನು ಮೈಸೂರು ಜಂಗಲಿ ಕಾರ್ಯದರ್ಶಿಯವರಿಂದ ಪಡೆಯಬಹುದು.